**11608** **M-485**

Sl.No. 08096 **Total No. of Pages : 3**

# ಮೂರನೆಯ ಚತುರ್ಮಾಸ ಬಿ.ಎ./ಬಿ.ಎಸ್ಸಿ./ಬಿ.ಪಿ.ಎ./ಬಿ.ಎಸ್.ಡಬ್ಲ್ಯೂ./ಬಿ.ಎಸ್ಸಿ./ ಎಫ್.ಸಿ.ಎಸ್.ಸಿ. ಪರೀಕ್ಷೆ, ಅಕ್ಟೋಬರ್/ನವೆಂಬರ್ 2018

## (ಚತುರ್ಮಾಸ ಸ್ಕೀಮ್)

## ಕನ್ನಡ ಭಾಷೆ (ಪತ್ರಿಕೆ–೩)

## ಸವಿಸ್ತರ, ಅವಿಸ್ತರ ಪಠ್ಯಗಳು

## ನಡುಗನ್ನಡ ಸಾಹಿತ್ಯ ಸಂಪುಟ–೧ ರಾಮಧಾನ್ಯ ಚರಿತ್ರೆ ಕಾಯಕ ಜೀವಿಗಳ ಚಳವಳಿ

ಸಮಯ: 3 ಗಂಟೆಗಳು ಗರಿಷ್ಠ ಅಂಕಗಳು : 80

*ಸೂಚನೆ: 2016-17 ರಿಂದ 2018-19 ರ ವಿದ್ಯಾರ್ಥಿಗಳಿಗೆ.*

**ಸವಿಸ್ತರ ಪಠ್ಯ : ನಡುಗನ್ನಡ ಸಾಹಿತ್ಯ ಸಂಪುಟ–೧ (40 ಅಂಕಗಳು)**

*ಪ್ರ1)* ಅ) ಒಂದರ ಭಾವವನ್ನು ಸಂದರ್ಭ ಸಹಿತ ವಿವರಿಸಿ: **[4]**

೧) ಅರಿಯದವರೊಡನೆ ಸಂಗವ ಮಾಡಿದರೆ
ಕಲ್ಲಹೊಯ್ದು ಕಿಡಿಯ ತೆಗೆದುಕೊಂಬಂತೆ!
ಬಲ್ಲವರೊಡನೆ ಸಂಗವ ಮಾಡಿದರೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣರ ಸಂಗ ಕರ್ಪೂರಗಿರಿಯ ಉರಿಯುಕೊಂಡಂತೆ!

೨) ಜವನ ಮೀಸೆಯ ಮುರಿದನೋ ಭೈ
ರವನ ದಾಡೆಯನಲುಗಿದನೊ ಮೃ
ತ್ಯುವಿನ ಮೇಲುದ ಸೆಳೆದನೊ ಕೇಸರಿಯ ಕೆಣಕಿದನೊ
ಬವರವನು ತೊಡಗಿದನಲಾ ಕೌ
ರವನಕಟ ಮರುಳಾದನೆಂದಾ
ಯುವತಿಯರ ಮೊಗ ನೋಡುತುತ್ತರ ಬಿರುದ ಕೆದರಿದನು.

ಆ) ಆರು ಪದಗಳಿಗೆ ಅರ್ಥ ಬರೆಯಿರಿ: **[6×½=3]**

ಅಬುಧಿ, ಕರಿ, ಸ್ತುತಿ, ಹದುಳ, ನೀರಜ, ಆಜ್ಯ,
ನಿಕರ, ರುಧಿರ, ತುರು, ತೇಜಿ.

ಇ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: **[2×1½=3]**

ದೇವರ ದಾಸಿಮಯ್ಯ, ಬೃಹನ್ನಳೆ, ಹರಿಹರದೇವಿ.

*P.T.O.*

Scanned with CamScanner

**ಪ್ರ2)** <u>ನಾಲ್ಕರ</u> ಸಂದರ್ಭ ಸ್ವಾರಸ್ಯವನ್ನು ವಿವರಿಸಿ: [4×2½=10]

೧) ಕುಳ್ಳಿರೆಂದಡೆ ನೆಲ ಕುಳಿಹೋಹುದೆ.
೨) ನಿನ್ನ ರೂಪೆನ್ನ ಕಂಗಳನಿಂಬುಗೊಂಡಿರಲು.
೩) ಸಾವ ಹೊತ್ತು ಪೊಡವಿಯೊಡೆತನ ದೊರಕಿ ಫಲವೇನು.
೪) ಕೌರವ ಸೇನೆ ಕಡೆದುದು ನಗೆಯ ಕಡಲೊಳಗೆ.
೫) ಕಟ್ಟಿಕೊಂಡ ಪಕೀರ್ತಿಯ ಸಾಯಬಾರದು.
೬) "ಅಪ್ಪಾ ಮಗು ಆ ಇದ್ಯೆಗಳುಗೆಲ್ಲ ಆದಿಸಕ್ತಿ ನಾನಲ್ಲುವಪ್ಪಾ?

**ಪ್ರ3)** <u>ಒಂದು</u> ಪ್ರಶ್ನೆಗೆ ಉತ್ತರಿಸಿ: [10]

೧) ಗಾನರಾಣಿಯರು ಮತ್ತು ಹರಿಶ್ಚಂದ್ರನ ನಡುವೆ ನಡೆದ ಸಂವಾದವನ್ನು ನಿರೂಪಿಸಿ.
೨) ಉತ್ತರ ಕುಮಾರನು ಬೃಹನ್ನಳೆಯನ್ನು ಸಾರಥಿಯಾಗಿ ಮಾಡಿಕೊಳ್ಳಬೇಕಾದ ಸನ್ನಿವೇಶವನ್ನು ವಿವರಿಸಿ.

**ಪ್ರ4)** <u>ಎರಡು</u> ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: [2×5=10]

೧) ದೇವರ ದಾಸಿಮಯ್ಯನ ವಚನಗಳಲ್ಲಿ ವ್ಯಕ್ತವಾಗಿರುವ ಶಿವಶರಣರ ವಚನಗಳ ಮಹತ್ವವೇನು?
೨) ಆದಿಶಕ್ತಿಯ ಅಹಂಕಾರವನ್ನು ಶಿವನು ಮುರಿದ ಬಗೆಯನ್ನು ತಿಳಿಸಿ.
೩) ಕೌರವ ಸೇನೆಯನು ಕಂಡ ಉತ್ತರಕುಮಾರನ ಪ್ರತಿಕ್ರಿಯೆಯನ್ನು ವಿವರಿಸಿ.
೪) ಶುಚಿವೀರ ಕುಮಾರರಾಮನ ವ್ಯಕ್ತಿತ್ವವನ್ನು ಪರಿಚಯಿಸಿ.

**ಅವಿಸ್ತರ ಪಠ್ಯ : ರಾಮಧ್ಯಾನ ಚರಿತ್ರೆ (20 ಅಂಕಗಳು)**

**ಪ್ರ5)** <u>ಒಂದು</u> ಪ್ರಶ್ನೆಗೆ ಉತ್ತರಿಸಿ: [10]

೧) ರಾಮಧಾನ್ಯ ಚರಿತ್ರೆಯಲ್ಲಿ ಶಾಂಡಿಲ್ಯಮುನಿ ಧರ್ಮರಾಯನಿಗೆ ತಿಳಿಸಿದ ರಾಮಕಥೆಯನ್ನು ನಿರೂಪಿಸಿ.
೨) ಅಕ್ಕಿ ಮತ್ತು ರಾಗಿ ತಮ್ಮ ಮಹಿಮಾತಿಶಯಗಳನ್ನು ಕುರಿತು ನಡೆಸಿದ ವಾಗ್ವಾದವನ್ನು ಕುರಿತು ಬರೆಯಿರಿ.

**ಪ್ರ6)** <u>ಒಂದು</u> ಪ್ರಶ್ನೆಗೆ ಉತ್ತರಿಸಿ: [10]

೧) ಶ್ರೀರಾಮ ಮತ್ತು ಋಷಿಗಳ ಭೇಟಿಯ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.
೨) ಸೆರೆಮನೆಯಲ್ಲಿದ್ದ ವ್ರೀಹಿನರೆದಲಗರ ಸತ್ವಪರೀಕ್ಷೆಯ ಪ್ರಸಂಗವನ್ನು ನಿರೂಪಿಸಿ.

**ಅವಿಸ್ತರ ಪಠ್ಯ : ಕಾಯಕ ಜೀವಿಗಳ ಚಳವಳಿ (20 ಅಂಕಗಳು)**

**ಪ್ರ7)** <u>ಒಂದು</u> ಪ್ರಶ್ನೆಗೆ ಉತ್ತರಿಸಿ: [10]

೧) ಕಾಯಕ ಜೀವಿಗಳ ಸಂಘಟನೆಯ ಸ್ವರೂಪವನ್ನು ವಿವರಿಸಿ.
೨) ಸಾಮಾನ್ಯರ ಮೇಲೆ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಯ ಸ್ವರೂಪವನ್ನು ವಿಮರ್ಶಾತ್ಮಕವಾಗಿ ಬರೆಯಿರಿ.





**ಪ್ರ8)** <u>ಎರಡು</u> ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ: [2×5=10]

೧) ಕಾಯಕ ಜೀವಿಗಳ ಶೋಷಣೆಗೆ ಕಾರಣವಾದ ತೆರಿಗೆಯ ಸ್ವರೂಪ.
೨) ಬಸವಣ್ಣ ಕಲ್ಯಾಣಕ್ಕೆ ಬರಲು ಕಾರಣವಾದ ಸಂದರ್ಭ.
೩) ದೇವಾಲಯ ಹಾಗೂ ಮಠಗಳ ಬಗ್ಗೆ ವಚನಕಾರರ ನಿಲುವು.
೪) ಕಾಯಕ ಜೀವಿಗಳ ಚಳವಳಿಯಲ್ಲಿ ಸ್ತ್ರೀಯರ ಪಾತ್ರ.

✓ ✓ ✓



Scanned with CamScanner